ಶ್ರೀ ಎಸ್. ಆರ್. ನಾಗಪ್ಪಶೆಟ್ಟರು.—ಈಗ ಆ ಪ್ರದೇಶದಲ್ಲಿ ಜನ ಸಂಖ್ಯೆ ಕಡಮೆಯಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ? ಹಾಗೆ ಕಡಮೆಯಾಗಲು ಈ ಒಡ್ಡನ್ನು ನಿರ್ಮಾಣ ಮಾಡದಿರುವುದೇ ಕಾರಣವೆಂಬುದು ತಮ್ಮ ಗಮನಕ್ಕೆ ಬಂದಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪನವರು.—ನಮ್ಮ ಗಮನಕ್ಕೆ ಬಂದಿಲ್ಲ. ಹಾಗೆ ಜನಸಂಖ್ಯೆ ಕಡಮೆಯಾಗುತ್ತಿರುವುದಕ್ಕೆ ನಾನಾ ಕಾರಣಗಳಿರಬಹುದು. ಆ ಪೈಕಿ ಇದೂ ಒಂದಾಗಿರಬಹುದು.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿಯವರು (ಗೌರಿಬಿದನೂರು).—ಹೀಗೆ ಎಸ್ಟಿಮೇಟುಗಳು ವರ್ಷೇವರ್ಷೇ ವ್ಯತ್ಯಾಸವಾಗುವುದಕ್ಕೆ ಕಾರಣವೇನು ಸ್ವಾಮಿ?

ಶ್ರೀ ಕಡಿದಾಳ್ ಮಂಜಪ್ಪನವರು.—ಆಯಾ ವರ್ಷದಲ್ಲಿರತಕ್ಕ ಕೂಲಿ ದರ ಮತ್ತು ಸಾಮಾನುಗಳ ದರ ಇತ್ಯಾದಿಗಳೆಲ್ಲವೂ ಆ ವ್ಯತ್ಯಾಸಕ್ಕೆ ಕಾರಣಗಳಾಗಿವೆ.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿಯವರು.—ಅಂದರೆ 1927–28ರಲ್ಲಿ ತಯಾರಿಸಿದ್ದ ಎಸ್ಟಿಮೇಟಿಗೂ ಮತ್ತು ಈಗ ಹೊಸದಾಗಿ ತಯಾರಿಸಿರತಕ್ಕ ಎಸ್ಟಿಮೇಟಿಗೂ 1 ಲಕ್ಷ 48 ಸಾವಿರ ಚಿಲ್ಲರೆ ಜಾಸ್ತಿಯಾಗಿರುತ್ತದೆ. ಇಷ್ಟೊಂದು ವ್ಯತ್ಯಾಸವಾಗುತ್ತದೆಯೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಹೌದು ಕೆಲವು ವೇಳೆ ಒಂದಕ್ಕೆ 5ರಷ್ಟು 6ರಷ್ಟು ವ್ಯತ್ಯಾಸವಾಗುತ್ತದೆ.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿಯವರು.—ಹೀಗೆ ಕೆಲಸವನ್ನು ನಿಧಾನಮಾಡದೆ ಆ ವರ್ಷವೇ ಕೈಕೊಂಡಿದ್ದರೆ ಸರ್ಕಾರಕ್ಕೆ ಇಷ್ಟೊಂದು ಹಣ ಉಳಿತಾಯವಾಗುತ್ತಿರಲಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಅದು ತಮ್ಮ ಅಭಿಪ್ರಾಯ.

Collection of contribution from raiyats below Marconahalli Reservoir.

Q.—405. **Sri N. HUCHMASTHYGOWDA** (Huliyurdurga).—

Will the Government be pleased to state:—

(*a*) the total amount of contribution to be collected from raiyats on the wet *achkat* below the Marconahalli Reservoir;

(*b*) out of this, the amount that has been collected up to 31st March 1952;

(*c*) the amount of contribution fixed per acre;

(*d*) the number of instalments in which the contribution amount has to be collected?

A.—**Sri Kadidal MANJAPPA** (Minister for Revenue and Public Works).—

(*a*) Rs. 17,50,000.

(*b*) Rs. 8,63,690.

(*c*) Rs. 125 per acre of dry lands converted into wet and Rs. 60 per acre in the case of existing wet and garden lands.

(*d*) In respect of—

	Dry lands newly converted into wet at Rs. 125 per acre in 12 instalments as detailed below	Existing wet and garden lands at Rs. 60 per acre in 5 instalments as detailed below
	At Rs. a. p.	At Rs. a. p.
1st year ...	3 8 0	7 8 0
2nd year ...	6 8 0	7 8 0
3rd year ...	6 8 0	15 0 0
4th year ...	8 8 0	15 0 0
5th year ...		15 0 0
6th year ...		
7th year ...		
8th year ...	At Rs. 12 8 0	
9th year ...	for 8 years (Rs. 100 0 0)	
10th year ...		
11th year ...		
12th year ...		
Total ...	125 0 0	60 0 0

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಈ ಕಂಟ್ರಿ ಬ್ಯೂಷೆಡ್ ಮೊಬಲಗನ್ನು ವಸೂಲು ಮಾಡಲು ಪ್ರಾರಂಭಿಸಿದ್ದು ಯಾವ ವರ್ಷದಲ್ಲಿ?

Sri Kadidal MANJAPPA.—That I cannot tell the Hon'ble Member.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಈಗ ವಸೂಲಾಗಿರತಕ್ಕ 8,63,690 ರೂಪಾಯಿಗಳ ಕಾಂಟ್ರಿ ಬ್ಯೂಷೆಡ್ ಪೈಕಿ, ಹಳ್ಳೇ ತರೀ ಜಮೀನುಗಳಿಂದ ಎಷ್ಟು ವಸೂಲಾಯಿತು ಮತ್ತು ಹೊಸ ತರೀ ಜಮೀನುಗಳಿಂದ ಎಷ್ಟು ವಸೂಲಾಗಿದೆ ಎಂಬುದನ್ನು ಹೇಳುವುದಕ್ಕಾಗುತ್ತದೆಯೇ?

Sri Kadidal MANJAPPA.—I cannot tell the Member now. There is no information.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಪ್ರತಿಯೊಬ್ಬ ರೈತನೂ ಸರ್ಕಾರಕ್ಕೆ ಕೊಡತಕ್ಕ ಬಾಕಿ ಎಷ್ಟು, ಆ ಪೈಕಿ ಎಷ್ಟನ್ನು ಕೊಟ್ಟಿದ್ದಾನೆ, ಮತ್ತು ಇನ್ನೆಷ್ಟು ಬಾಕಿ ಇರುತ್ತೆ ಎಂಬುದರ ಬಗ್ಗೆ ಆತನಿಗೆ ಒಂದು ಪಟ್ಟಿಯನ್ನು ಒದಗಿಸತಕ್ಕದ್ದು ಅವಶ್ಯಕವಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಹೌದು. ಅವಶ್ಯಕ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಹೀಗೆ ಆ ಮಾಹಿತಿಯನ್ನು ಹಳ್ಳಿ ಜಿಲ್ಲೆಯಲ್ಲಿರುವ ರೈತರಿಗೆ ಕೊಡುವ ಡಿ. ಸಿ. ಬಿ. ಪಟ್ಟಿಯನ್ನು ತಯಾರಿಸಿರುತ್ತಾರೆಯೇ?

ಶ್ರೀ ಕಡಿದಾಳ್ ಮಂಜಪ್ಪನವರು.—ತಯಾರಿಸಿದ್ದಾರೆಂದು ನನಗೆ ವರ್ತಮಾನ ಬಂದಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಹಾಗೆ ಪಟ್ಟಿಗಳನ್ನು ತಯಾರಿಸಿದ್ದ ಭಾಗದಲ್ಲಿ ಅವುಗಳನ್ನು ರೈತರಿಗೆ ಹಂಚಿದ್ದಾರೆಯೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಅನೇಕರಿಗೆ ಹಂಚಿದ್ದಾರೆಂದು ನನಗೆ ವರ್ತಮಾನ ಬಂದಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಈ ಕಾಂಟ್ರಿ ಬ್ಯೂಷೆಡ್ ಮೊಬಲಗು ಎಕರೆಗೆ 125 ರೂ. ಗಳೆಂದು ಹೇಳಿದ್ದೀರಿ. ಆದರೆ ವಿಶ್ವೇಶ್ವರಯ್ಯ ಕೆನಾಲ್ ಏರಿಯಾದಲ್ಲಿ ಹಾಕಿರತಕ್ಕದ್ದಕ್ಕೂ, ಇದಕ್ಕೂ ಬಹಳ ವ್ಯತ್ಯಾಸವಿದೆ. ಕಾರಣವೇನು?

ಶ್ರೀ ಕಡಿದಾಳ್ ಮಂಜಪ್ಪನವರು.—ಅಂಥ ವ್ಯತ್ಯಾಸಗಳು ಇದ್ದೇ ಇರುತ್ತವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಆ ವ್ಯತ್ಯಾಸಗಳನ್ನು ಯಾವ ಆಧಾರದ ಮೇಲೆ ನಿರ್ಧಾರ ಮಾಡುತ್ತೀರಿ?

Sri Kadidal MANJAPPA.—Contribution, the cost of the breach, the nature of the soil and other similar circumstances.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಇಲ್ಲಿ ಹಳ್ಳೇ ತರೀಗೆ 60 ರೂಪಾಯಿಗಳ ಕಾಂಟ್ರಿಬ್ಯೂಷೆಡ್ ಗೊತ್ತು ಮಾಡಿದ್ದೀರಿ. ವಿಶ್ವೇಶ್ವರಯ್ಯ ನಾಲಾ ಪ್ರದೇಶದಲ್ಲಿ ಹಳ್ಳೇ ತರೀಗೆ ಎಷ್ಟು ಹಾಕಿದೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಇದಕ್ಕಿಂತ ಜಾಸ್ತಿಯಾಗಿ ಹಾಕಿದೆಯೆಂದು ನನಗೆ ವರ್ತಮಾನ ಬಂದಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಕುಳವಾರು ಡಿ. ಸಿ. ಬಿ. ಲೆಕ್ಕ ಇದಕ್ಕೆ ತಯಾರಾಗಬೇಕಾದರೆ ಜಮೀನು ಸರ್ವೆಮಾಡಿ ಕರಾರುವಾಕ್ಕಾಗಿ ತಯಾರಿಸುವುದು ಅವಶ್ಯಕವಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಕೆಲವು ಸಂದರ್ಭಗಳಲ್ಲಿ ಕರಾರುವಾಕ್ಕಾಗಿ ಗೊತ್ತಾಗಿರುತ್ತದೆ. ಕರಾರುವಾಕ್ಕಾಗಿ ಗೊತ್ತಾಗದಿರುವ ಸಂದರ್ಭದಲ್ಲಿ ಗೊತ್ತುಮಾಡಬೇಕಾಗುತ್ತದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಮೊನ್ನೆ ಪ್ರಶ್ನೋತ್ತರಗಳ ಕಾಲದಲ್ಲಿ ಪ್ರಶ್ನೆ ಕೇಳಿದಾಗ ಮಡು, ಜೌಗು ಪ್ರದೇಶವಿರುವ ಕಡೆ ರೆವೆನ್ಯೂ ಸರ್ವೆ ಆಗಿಲ್ಲವೆಂದು ಗೊತ್ತಾಯಿತು. ಅಲ್ಲಿ ರೆವೆನ್ಯೂ ಸರ್ವೆ ಮಾಡುವುದು ಅವಶ್ಯಕವಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಅವಶ್ಯಕತೆಯಿದ್ದರೆ ಮಾಡುತ್ತೇವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಈಗ ಮಂಡ್ಯ ಪ್ರದೇಶದಲ್ಲಿ ವಿಶ್ವೇಶ್ವರಯ್ಯ ನಾಲಾ ಕೆಳಗೆ ವಾಟರ್ ರೇಟ್, ಕಾಂಟ್ರಿಬ್ಯೂಷೆಡ್ ಅನೇಕ ರೈತರು ಕೊಡಬೇಕಾಗಿರುವ ಮೊಬಲಗಿಗಿಂತ ಹೆಚ್ಚಾಗಿ ವಸೂಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಹೆಚ್ಚಾಗಿ ವಸೂಲಾಗಿದೆಯೆಂಬುದನ್ನು ಒಪ್ಪುವುದಕ್ಕಾಗುವುದಿಲ್ಲ. ಲೆಕ್ಕದ ಪ್ರಕಾರ ಕೊಡಬೇಕಾದುದಕ್ಕಿಂತ ಕಡಮೆ ಬಂದಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—17 ಲಕ್ಷದಲ್ಲಿ 8 ಲಕ್ಷ ಬಂದಿರುವುದರಿಂದ ಕಡಮೆಯೆಂದು ಹೇಳಬಹುದು. ಒಬ್ಬೊಬ್ಬ ರೈತರಿಂದ ಕೆಲವು ಸಂದರ್ಭಗಳಲ್ಲಿ ಕೊಡುವುದಕ್ಕಿಂತ ಹೆಚ್ಚಾಗಿ ವಸೂಲಾಗಿರುವುದು ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಬಂದಿಲ್ಲ. ಹಾಗೇನಾದರೂ ಆಗಿದ್ದರೆ ಸರಿಪಡಿಸುತ್ತೇವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಮುಖ್ಯವಾಗಿ ಜಮೀನು ಸರ್ವೆ ಮಾಡುವುದು ಅಗತ್ಯ. ಸರ್ವೆ ಆಗದಿರುವುದರಿಂದ ಈ ತೊಂದರೆ ಎಂಬುದು ಗೊತ್ತೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಅವಶ್ಯಕವೆಂದು ಕಂಡುಬಂದರೆ ಮಾಡಿಸಲೇಬೇಕು.

ಶ್ರೀ ಕೆ. ಎ. ಶಂಕರಗೌಡರು (ಮಂಡ್ಯ).—ರೈತರಿಗೆ ಪಟ್ಟೆ ಕೊಟ್ಟಿಲ್ಲವೆಂದು ಕೊಡದಿರುವಾಗ ಹೇಳಿದರೆ ತೊಂದರೆಯೇನು?

ಶ್ರೀ ಕಡಿದಾಳ್ ಮಂಜಪ್ಪನವರು.—ಹೇಳಿದರೆ ತೊಂದರೆಯೇನೂ ಬರುವುದಿಲ್ಲ.

ಶ್ರೀ ಬಿ. ಹುಚ್ಚೇಗೌಡರು (ತುರುವೇಕೆರೆ).—ಪಟ್ಟೆಯನ್ನು ಅನೇಕ ಸಂದರ್ಭಗಳಲ್ಲಿ ಕೊಟ್ಟಿಲ್ಲವೆಂದು ಹೇಳಿದರೆ ಒಪ್ಪುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪನವರು.—ಒಪ್ಪುವುದಕ್ಕೆ ಸಾಧ್ಯವಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಕೆಲವು ಸಂದರ್ಭಗಳಲ್ಲಿ ಕೊಡದಿರುವುದಕ್ಕೆ ಕಾರಣವೇನು?

ಶ್ರೀ ಕಡಿದಾಳ್ ಮಂಜಪ್ಪನವರು.—ವಿಚಾರ ಮಾಡಬೇಕು.

ಶ್ರೀ ಬಿ. ಹುಚ್ಚೇಗೌಡರು.—ಈಗ ಕೊಟ್ಟಿರುವ ಹಣವನ್ನು ಬಡ್ಡಿಗೆ ಕಟ್ಟಿಕೊಂಡಿರುವುದು ಗೊತ್ತೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಬಾಕಿಯಿದ್ದರೆ ಆರೀತಿ ಜಮಾ ಮಾಡಿಕೊಂಡಿರಬಹುದು.

ಶ್ರೀ ಬಿ. ಹುಚ್ಚೇಗೌಡರು.—ಹಿಂದೆ ಬಡ್ಡಿ ಬಿಟ್ಟು ಬಾಕಿಯನ್ನು ಮಾತ್ರ ತೆಗೆದುಕೊಳ್ಳುವುದಾಗಿ ಭರವಸೆ ಕೊಟ್ಟಿರುವುದು ಸರ್ಕಾರದ ಗಮನದಲ್ಲಿದೆಯೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಬರಹದ ಮೂಲಕವಾಗಿ ಕೊಟ್ಟಿರುವುದು ಗಮನಕ್ಕೆ ಬಂದಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಲೆಕ್ಕ ಸರಿಯಾಗಿಲ್ಲದಿರುವುದರಿಂದ ಮುಂದಾದರೂ ಬಡ್ಡಿ ಬಿಟ್ಟು 125 ರೂಪಾಯಿಗಳನ್ನು ಮಾತ್ರ ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪನವರು.—ಯೋಚನೆ ಮಾಡುತ್ತೇವೆ.

ಶ್ರೀ ಬಿ. ಹುಚ್ಚೇಗೌಡರು.—12 ವರ್ಷಗಳಲ್ಲಿ ಪೂರ್ತಿಯಾಗಿ ಹಣ ಕೊಡಬೇಕಾಗಿದೆ. ಈಗ ಪೂರ್ತಿಯಾಗಿ ಪಾವತಿಯಾಗಿದೆಯೊ ಅಥವಾ ಬಾಕಿ ಇದೆಯೊ ?

ಶ್ರೀ ಕಡಿದಾಳ್ ಮಂಜಪ್ಪನವರು.—ಬಾಕಿ ಇದೆ.

ಶ್ರೀ ಬಿ. ಹುಚ್ಚೇಗೌಡರು.—ಎಷ್ಟು ವರ್ಷದ್ದು ಬಾಕಿಯಿದೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಅದನ್ನು ಹೇಳುವುದಕ್ಕಾಗುವುದಿಲ್ಲ. ಅಂತೂ ಬಾಕಿಯಿದೆ.

Improvement of Kadur—Mangalore Road.

Q.—441. **Srimathi B. L. SUBBAMMA** (Chikmagalur-Mudigire).—Will the Government be pleased to state.—

(a) whether they have under contemplation the improvements of the Kadur—Mangalore Road;

(b) if so, what are the improvements contemplated ?

A.—**Sri Kadidal MANJAPPA** (Minister for Revenue and Public Works).—

(a) Yes.

(b) (i) Concreting the road between Kadur and Chikmagalur, two miles at either end, at a cost of Rs. 2·00 lakhs allotted under Road Development Scheme for 1952-53.

(ii) Asphalting the road 7 miles in length at a cost of Rs. 1·00 lakh during 1952-53.

ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು.—ಕಡೂರಿಗೆ 2 ಮೈಲಿ, ಚಿಕ್ಕಮಗಳೂರಿಗೆ 2 ಮೈಲಿ ಮಾಡಲಾಗುವುದೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಇಲ್ಲ.

ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು.—ಕೆಲಸ ಪ್ರಾರಂಭಿಸುವುದು ಯಾವಾಗ ?

ಶ್ರೀ ಕಡಿದಾಳ್ ಮಂಜಪ್ಪನವರು.—ಜಾಗ್ರತೆ ಮಾಡುತ್ತೇವೆ. ಈಗಾಗಲೇ ಆಗಿದೆಯೋ ಏನೋ ಗೊತ್ತಿಲ್ಲ. ಆಗಿಲ್ಲದಿದ್ದರೆ ಆಗುವಂತೆ ಮಾಡುತ್ತೇವೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು.—ಅದಕ್ಕೆ ಎಷ್ಟು ವರ್ಷಬೇಕು ?

ಶ್ರೀ ಕಡಿದಾಳ್ ಮಂಜಪ್ಪನವರು.—ನಾಲ್ಕೈದು ತಿಂಗಳುಗಳು.

ಶ್ರೀಮತಿ ಬಿ. ಎಲ್. ಸುಬ್ಬಮ್ಮನವರು.—ಪೂರ್ತಿಯಾಗಿ ಕೆಲಸವಾಗುವುದಕ್ಕೆ ಎಷ್ಟು ಕಾಲಬೇಕು ?

ಶ್ರೀ ಕಡಿದಾಳ್ ಮಂಜಪ್ಪನವರು.—ಅದು ಹಣ ಕಾಸಿನ ಸ್ಥಿತಿಗತಿಯ ಮೇಲೆ ಹೋಗುವುದರಿಂದ ಈಗ ಹೇಳುವುದಕ್ಕಾಗುವುದಿಲ್ಲ.

ಶ್ರೀಮತಿ ಬಿ.ಎಲ್. ಸುಬ್ಬಮ್ಮನವರು.—ಕಡೂರು—ಚಿಕ್ಕಮಗಳೂರು ರಸ್ತೆಗೆ ಎರಡು ಮೈಲಿಗಳ ದೂರ ಸಿಮೆಂಟ್ ಕಾರ್ಪೆಟ್ ಹಾಕುವುದಾಗಿ ಹೇಳಿದೆ. ಎರಡುಕಡೆ ಹಾಕುವುದು ಎಲ್ಲೆಲ್ಲಿ ?

ಶ್ರೀ ಕಡಿದಾಳ್ ಮಂಜಪ್ಪನವರು.—ಕಡೂರು, ಚಿಕ್ಕಮಗಳೂರು.

ಶ್ರೀ ಕೆ. ಲಕ್ಕಪ್ಪನವರು (ಚನ್ನರಾಯಪಟ್ಟಣ).—ಸಿಮೆಂಟ್ ಕಾರ್ಪೆಟ್ ಹಾಕಿಸುವುದು ಯಾರ ಮುಖಾಂತರ ?

ಶ್ರೀ ಕಡಿದಾಳ್ ಮಂಜಪ್ಪನವರು.—ಇರಾಖೆಯ ಮೂಲಕ.

ಶ್ರೀ ಕೆ. ಲಕ್ಕಪ್ಪನವರು.—ಇಲಾಖೆ ಮಾಡಿರುವುದನ್ನು ತನಿಖೆ ಮಾಡುವವರು ಯಾರು ?

ಶ್ರೀ ಕಡಿದಾಳ್ ಮಂಜಪ್ಪನವರು.—ಮೇಲ್ಪಟ್ಟ ಅಧಿಕಾರಿಗಳು.

ಶ್ರೀ ಕೆ. ಲಕ್ಕಪ್ಪನವರು.—ಅದರಿಂದ ಸರಿಯಾಗಿ ಕೆಲಸವಾಗುವುದಿಲ್ಲವೆಂಬುದು ಸರ್ಕಾರಕ್ಕೆ ಗೊತ್ತಾಗಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಸರಿಯಾಗಿ ನಡೆಯುತ್ತಿದೆಯೆಂದು ನಮಗೆ ಗೊತ್ತಾಗಿದೆ.

ಶ್ರೀ ಕೆ. ಲಕ್ಕಪ್ಪನವರು.—ಕೇಂದ್ರ ಸರ್ಕಾರದವರು ಇಂಥ ಕೆಲಸ ಕಾರ್ಯಗಳನ್ನು ಪ್ರೈವೇಟ್ ಕಾರ್ಪೊರೇಷನ್‌ಗೆ ಕೊಡಬೇಕೆಂದು ತೀರ್ಮಾನಮಾಡಿರುವುದು ಗೊತ್ತೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ನಮ್ಮಲ್ಲಿ ಅಂಥ ಕಾರ್ಪೊರೇಷನ್ ಇದ್ದರೆ ಯೋಚನೆಮಾಡಬಹುದು.

ಶ್ರೀ ವೈ.ಎಂ. ಚಂದ್ರಶೇಖರಯ್ಯನವರು (ಕಡೂರು).—3-4 ವರ್ಷಗಳಿಂದ ಜಲ್ಲಿ ಜವಾಬಣೆಯಾಗುತ್ತಿರುವುದು ಬೇರೆ ಕಡೆಗೆ ಹೋಗುತ್ತಿರುವುದು ಗೊತ್ತಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಇಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಹೋದ ವರ್ಷ ಸಿಮೆಂಟಿಗಾಗಿ ಎರಡುಲಕ್ಷ ರೂಪಾಯಿಗಳು ಮಂಜೂರಾಗಿದ್ದರೂ ಕೆಲಸವಾಗದಿರುವುದು ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಮಾಡಿಸುತ್ತೇವೆ.

ಶ್ರೀ ಟಿ. ನಾಗಪ್ಪನವರು (ತರೀಕೆರೆ).—ಒಂದು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕಲ್ಲರಗನ್ನು ಹಾಕುವುದು ಎಷ್ಟು ವರ್ಷ ಬಾಳಿಕೆ ಬರುತ್ತದೆ.

ಶ್ರೀ ಕಡಿದಾಳ್ ಮಂಜಪ್ಪನವರು.—ನಾಲ್ಕೈದು ವರ್ಷ.

ಶ್ರೀ ಟಿ. ನಾಗಪ್ಪನವರು.—ಅದರ ಬದಲು ಸಿಮೆಂಟ್ ರಸ್ತೆಯನ್ನೇಕೆ ಮಾಡಬಾರದು ?

ಶ್ರೀ ಕಡಿದಾಳ್ ಮಂಜಪ್ಪನವರು.—ಸಿಮೆಂಟ್ ಕಾರ್ಪೆಟ್ ರಸ್ತೆಗೆ ಹತ್ತು ಅಡಿಗಳ ಅಗಲ ಮಾಡುವುದಕ್ಕೆ ಒಂದು ಮೈಲಿಗೆ 50 ಸಾವಿರ ರೂಪಾಯಿಗಳು ಬೇಕು. ಅದರಿಂದ ಕೆಲವು ಜಾಗಗಳಲ್ಲಿ ಮಾಡೋಣವೆಂದು ಯೋಚನೆಮಾಡಿದ್ದೇವೆ.

ಶ್ರೀ ಟಿ. ನಾಗಪ್ಪನವರು.—ಖಾಯಂ ಆಗಿರುವುದರಿಂದ ಈ ಕಲ್ಲರಗಿನ ರಸ್ತೆಗಾಗುವ ಖರ್ಚನ್ನು ಸಿಮೆಂಟ್ ರಸ್ತೆಮಾಡಲು ಉಪಯೋಗಿಸಬಹುದಲ್ಲವೆ ?

(ಉತ್ತರವಿಲ್ಲ.)